SRI KAGODU THIMMAPPA.—Sir, so far as Assistant Executive Engineers are concerned, Inter-State Seniority list has been prepared. But, this question pertains to only Junior engineers and diploma holders.

MR. SPEAKER.—The question reads like this :

"Total number of Junior Engineers (L.C.E) working in the Department and number of unemployed persons."

SRI C. M. ARUMUGHAM.—Sir, in the answers, the Hon.Minister says :

"Seniority list of Junior Engineers as on 1-11-1956 has been quashed by the High Court in Writ Petition No. 13585/75 and revised final Inter-State Seniority list as on 1-11-1956 is yet to be published by the Government."

When you appoint Junior Engineers, they become J. Es and A.E.Es etc, etc, in course of time. So, I only want to know how many J. Es were working as on 1-11-1956 ?

SRI KAGODU THIMMAPPA.—I do not have that information at present.

ಶ್ರೀ ಕೆ. ಬಿ. ಮಲ್ಲಪ್ಪ.—ಸ್ವಾಮಿ, ಇಲ್ಲಿ ೧೨೨೦ ಖಾಯಂ ಹುದ್ದೆಗಳು ಜೂನಿಯರ್ ಇಂಜಿನಿಯರ್ ಗಳಿಗೆ ಸಂಬಂಧಪಟ್ಟಂತೆ ಇವೆ ಎಂದು ಹೇಳಿದ್ದಾರೆ. ಆದರೆ ಈಗ ಹಾಲಿ ೩೫೦೦ ಜನರು ಏನು ಕೆಲಸ ಮಾಡುತ್ತಿದ್ದಾರೆ, ಅವರ ಪೈಕಿ ಯಾರು ಯಾರು ಟೆಂಪರರಿ ಯಾಗಿ ಕೆಲಸ ಮಾಡುತ್ತಿದ್ದಾರೊ. ಅಂತಹವರನ್ನು ಈ ಖಾಯಂ ಹುದ್ದೆಗಳಲ್ಲಿ ಏತಕ್ಕೆ ಕನ್‌ಫರ್ಮ್ ಮಾಡಬಾರದು ? ಇದಕ್ಕೆ ಏನು ತೊಂದರೆ ಇದೆ ?

SRI KAGODU THIMMAPPA.—For all practical purposes, they are all working as permanent employees. They have to be confirmed, only for the formality sake. Sometimes, at the time of retirement, they used to be treated as permanent employees. Seniority list finalise. ಆಗದಿರುವ ಕಾರಣದಿಂದ ಕನ್‌ಫರ್ಮ್ ಮಾಡಿಲ್ಲ. ಸೀನಿಯಾರಿಟಿ ಲಿಸ್ಟ್ ಪಬ್ಲಿಷ್ ಆದಮೇಲೆ ಈ ಕೆಲಸ ಆಟೋಮ್ಯಾಟಿಕ್ ಆಗಿ ಆಗುತ್ತದೆ.

Electrification of Villages in Kunigal Taluk.

173 SRI D. T. MAYANNA (Huliyurdurga).—Will the Minister of State for Power be pleased to state.—

(*a*) the number and names of villages in Kunigal Taluk, Tumkur District, where electricity has not been supplied, though poles were fixedby Karnataka Electricity Board ;

(*b*) the number of villages in Kunigal Taluk which have not been included in the Rural Electrification Scheme ; the names of such villages ;

(*c*) whether Government intend to take action for inclusion of such villages in the Rural Electrification Scheme, and direct the Karnataka Electricity Board for supply of electricity immediately ?

SRI G.H. ASWATHA REDDY (Minister of State for Power).—

(*a*) The number of villages where electricity has not been supplied though poles were fixed-2 they are—

(1) Tippasandra

(2) Kudumepalya

(*b*) Number of villages which were not included in the Rural Electrification Scheme 77. List of Names of villages have been laid on the Table of the House.

(*c*) The question of electrification of these villages could be considered after supply of the electrical equipment relating to the work and in consonance with the Board Regulations.

12-30 P.M.

ಶ್ರೀ ಡಿ. ಟಿ. ಮಾಯಣ್ಣ.—ಉತ್ತರದಲ್ಲಿ ಕುಣಿಗಲ್ ತಾಲ್ಲೂಕಿನಲ್ಲಿ ೭೭ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿಲ್ಲ ಎಂದು ಹೇಳಿದಿರಿ. ಆದರೆ ಇಷ್ಟು ಹಳ್ಳಿಗಳಿಗೆ, ಇಷ್ಟು ದಿವಸದವರೆಗೂ ವಿದ್ಯುಚ್ಛಕ್ತಿಯನ್ನು ಕೊಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ.—ಮೆಟೀರಿಯಲ್ಸ್ ಇರಲಿಲ್ಲ, ಈಗ ಮೆಟೀರಿಯಲ್ಸ್‌ಗೆ ನಾವು ಆರ್ಡರ್ ಪ್ಲೇಸ್ ಮಾಡಿದ್ದೇವೆ, ಈ ವರ್ಷ ಮತ್ತು ಮುಂದಿನ ವರ್ಷ ಹಳ್ಳಿಗಳಿಗೆ ಸಾಧ್ಯವಾದಷ್ಟು ವಿದ್ಯುಚ್ಛಕ್ತಿಯನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ. ಟಿ. ಮಾಯಣ್ಣ.—ಕುಣಿಗಲ್ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಬಗ್ಗೆ ಕಂಭಗಳನ್ನು ಹಾಕಿ ೮ ವರ್ಷ ಆಯಿತು. ೧೯೭೩ನೇ ಇಸವಿಯಿಂದ ಯಾವ ಕೆಲಸವೂ ನಡೆದಿರುವುದಿಲ್ಲ. ಮೆಟೀರಿಯಲ್ಸ್ ಬರುತ್ತದೆ ಎಂದು ಇಲ್ಲಿಯವರೆಗೂ ಇದ್ದಾರೆ. ಸಾಮಾನ್ಯವಾಗಿ ಈ ವಿಷಯವನ್ನು ಅಧಿಕಾರಿಗಳ ಗಮನಕ್ಕೂ ತಮ್ಮ ಗಮನಕ್ಕೂ ನಾನು ತಂದಿದ್ದೇನೆ. ಕೆಲವು ಹಳ್ಳಿಗಳಲ್ಲಿ ೧೯೭೨ನೇ ಇಸವಿಯಲ್ಲಿ ಕಮ್ಯುನಿಟಿ ವೆಲ್ಸ್ ಮಾಡಿ ಆ ಬಾವಿಗಳಿಗೆ ೪೦-೫೦ ಸಾವಿರ ಖರ್ಚುಮಾಡಿದ್ದಾರೆ. ಆ ಬಾವಿಗಳಿಗೆ ಎಲೆಕ್ಟ್ರಿಸಿಟಿ ಕೊಡದೆ ಕಂಪ್ಲೀಟಾಗಿ ಆ ತಾಲ್ಲೂಕನ್ನು ಕಡೆಗಣಿಸಿದ್ದಾರೆ. ಆದುದರಿಂದ ಇದರ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಂಡು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ.—ಕಂಭಗಳನ್ನು ಹಾಕಿದ ಎರಡು ಹಳ್ಳಿಗಳಿವೆ. ನಿಪ್ಪಸಂದ್ರ ಮತ್ತು ಕುಲುಮೆಪಾಳ್ಯ, ಇದಕ್ಕೆ ಕೊಟ್ಟಿದೆ. ನಮಗೆ ಬಂದಿರುವ ಪ್ರಕಾರ ೨೯೦ ಹಳ್ಳಿಗಳಲ್ಲಿ ೧೫೩ ಹಳ್ಳಿಗಳಿಗೆ ಮಾತ್ರ ಕೊಟ್ಟಿದ್ದೇವೆ, ಉಳಿದ ೧೩೭ ಹಳ್ಳಿಗಳಿಗೆ ೫೫ ಹಳ್ಳಿಗಳನ್ನೂ ಸೇರಿಸಿದ್ದೇವೆ, ೫೨ ಹಳ್ಳಿಗಳಿಗೆ ಮಾತ್ರ ಕೊಟ್ಟಿಲ್ಲ.

ಶ್ರೀ ಡಿ. ಟಿ. ಮಾಯಣ್ಣ.—ಎಸ್ಟಿಮೇಟ್ ಆಗಿರುತ್ತದೆ, ಕಂಭಗಳಿದ್ದರೆ ಮೆಟೀರಿಯಲ್ಸ್ ಇಲ್ಲ. ಮೆಟೀರಿಯಲ್ಸ್ ಇದ್ದರೆ ಕಂಭಗಳು ಇರುವುದಿಲ್ಲ ಎಂದು ಹೇಳುತ್ತಾರೆ, ೮ ವರ್ಷಗಳಿಂದ ಕುಣಿಗಲ್ ತಾಲ್ಲೂಕಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿಲ್ಲ. ಹಿಂದೆ ೧೯೭೩ನೇ ಇಸವಿಯಲ್ಲಿ ಈ ಎರಡು ಹಳ್ಳಿಗಳಿಗೆ ಕಂಭ

ಗಳನ್ನು ನೆಟ್ಟಿದ್ದಾರೆ. ಈ ವರ್ಷ ಕಂಪ್ಲೀಟಾಗಿದೆ. ನಾನು ಈ ಪ್ರಶ್ನೆಯನ್ನು ಕೇಳಿ ೨ ವರ್ಷಗಳಾಯಿತು ಕಂಚಿಗಲ್ ತಾಲ್ಲೂಕಿನಲ್ಲಿ ತಾವೂ ಕೂಡ ನೋಡಿದ್ದೀರಿ. ಹಳ್ಳಿಗಳಲ್ಲಿ ಎಷ್ಟು ಕಷ್ಟ ಇದೆಯೆಂದು ತಮಗೆ ಗೊತ್ತಿದೆ, ಅಲ್ಲಿ ನೀರಾವರಿ ಪ್ರದೇಶ ಏನಿಲ್ಲ. ಎಲೆಕ್ಟ್ರಿಸಿಟಿ ಇದ್ದರೆ ಬಾವಿಗಳನ್ನು ತೆಗೆದುಕೊಂಡು ಜೀವನ ಮಾಡುವುದಕ್ಕೆ ಜನಗಳಿಗೆ ಅನುಕೂಲವಾಗುತ್ತದೆ. ಆದುದರಿಂದ ತಾವು ಆ ಪ್ರದೇಶಕ್ಕೆ ಪ್ರಯಾರಿಟಿ ಕೊಟ್ಟು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ.—ಆದಷ್ಟು ಜಾಗ್ರತೆ ಈ ಹಳ್ಳಿಗಳಿಗೆ ಎಲೆಕ್ಟ್ರಿಫೈ ಮಾಡುವುದಕ್ಕೆ ಆದೇಶ ಕೊಟ್ಟಿದ್ದೇನೆ. ನಾನು ಖುಬ್ದಾಗಿ ಪರಿಶೀಲಿಸಿ, ಎಲ್ಲಾ ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಕೊಡ ಬೇಕು ಎಂದು ಹೇಳಿದ್ದೇನೆ.

ಶ್ರೀಮತಿ ಮೋಟಮ್ಮ.—ಮೆಟೀರಿಯಲ್ಸ್ ಕೊರತೆಯನ್ನು ನಿವಾರಿಸಲಿಕ್ಕೆ ಏನು ಪ್ರಯತ್ನ ಮಾಡಿದ್ದೀರಿ ?

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ.—ಸರ್ಕಾರದಿಂದ ಮೆಟೀರಿಯಲ್ಸ್‌ಗೆ ೧೪ ಕೋಟಿ ರೂಪಾಯಿಗಳ ಆರ್ಡರನ್ನು ಪ್ಲೇಸ್ ಮಾಡಿದ್ದೇವೆ. ಇನ್ನು ಒಂದೆರಡು ತಿಂಗಳಲ್ಲಿ ಬಂದಮೇಲೆ ಕಾರ್ಯಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀಮತಿ ಮೋಟಮ್ಮ.—ಬಂದ ಮೇಲೆ ಸಫಿಷಿಯಂಟ್ ಮೆಟೀರಿಯಲ್ಸ್ ಕೊಡಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ.—ಅದೇ ಉದ್ದೇಶದಿಂದಲೇ ಆರ್ಡರನ್ನು ಪ್ಲೇಸ್ ಮಾಡಿರುವುದು.

ಶ್ರೀ ಹೆಚ್ ಎಲ್. ತಿಮ್ಮೇಗೌಡ.—ಈ ಪ್ರಶ್ನೆಗೆ ಮಾನ್ಯ ಮಂತ್ರಿಗಳಿಂದ ಉತ್ತರ ಬಯಸುತ್ತೇನೆ. ಈ ಮೆಟೀರಿಯಲ್ಸ್ ಪರ್ಚೇಸ್ ಮಾಡಿಕೊಳ್ಳುವುದಕ್ಕೆ ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ ಅದರ ಛೇರ್ಮನ್‌ರವರಿಗೆ ಇದ್ದಂಥ ಅಧಿಕಾರವನ್ನು ಹಿಂದೆ ಯಾವುದೋ ಕಾರಣದಿಂದ ಕಿತ್ತುಕೊಂಡಿದ್ದಾರೆ. ಎಲ್ಲಿಯವರೆಗೆ ಬೋರ್ಡ್ ಮಿಟ್‌ಮಾಡಿ ಪರ್ಚೇಸ್‌ಮಾಡಬೇಕು ಎಂದು ಇರುತ್ತದೋ ಅಲ್ಲಿಯವರೆಗೆ ಪರ್ಚೇಸ್ ಮಾಡುವುದಕ್ಕೆ ಆಗುವುದಿಲ್ಲ. ಹಿಂದೆ ಛೇರ್ಮನ್‌ರಿಗೆ ಇದ್ದಂಥ ಅಧಿಕಾರವನ್ನು ರೆಸ್ಟೋರ್ ಮಾಡಿ ಜಾಗ್ರತೆ ಮೆಟೀರಿಯಲ್ಸ್ ಸಪ್ಲೈ ಮಾಡುವುದಕ್ಕೆ ಭರವಸೆ ಕೊಡುತ್ತೀರಾ ?

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ.—ಛೇರ್ಮನ್‌ರಿಗೆ ಅಧಿಕಾರ ಕೊಡಬೇಕು ಎನ್ನುವುದು ಸರ್ಕಾರದ ಪರಿಶೀಲನೆಯಲ್ಲಿದೆ ಮತ್ತು ಬೋರ್ಡ್‌ನಲ್ಲಿ ಮಿಟಿಂಗ್ ಸೇರಿ ಮೆಟೀರಿಯಲ್ಸ್ ವಿಷಯದಲ್ಲಿ ಒಂದೇ ಅಭಿಪ್ರಾಯವಿದೆ. ಮೆಟೀರಿಯಲ್ಸ್, ಖರೀದಿ ಮಾಡಬೇಕು ಮತ್ತು ವಿದ್ಯುಚ್ಛಕ್ತಿ ಒದಗಿಸಬೇಕು ಎನ್ನತಕ್ಕ ಸದುದ್ದೇಶ ಎಲ್ಲರಿಗೂ ಇದೆ. ಛೇರ್ಮನ್ನರಿಗೆ ಪವರ್ ಕೊಡತಕ್ಕ ವಿಷಯ ಸರ್ಕಾರದಲ್ಲಿದೆ. ಅದನ್ನು ಕಡೆಗಾಣಿಸಿಲ್ಲ, ಅವರ ವಿಷಯದ ಬಗ್ಗೆ ಆದಷ್ಟು ಜಾಗ್ರತೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಡಿ. ಟಿ. ಮಾಯಣ್ಣ.—ಈ ಡಿಪಾರ್ಟ್‌ಮೆಂಟ್‌ನಲ್ಲಿ, ಬೆಂಗಳೂರಿನಲ್ಲಿ ತಯಾರಾಗತಕ್ಕ ಸಾಮಾನುಗಳಿಗೆ ಕಲ್ಕತ್ತಾಗೆ ಆರ್ಡರ್ ಕೊಡುತ್ತಾರೆ, ಅಲ್ಲಿಂದ ತರಬೇಕಾದರೆ ಲೇಟ್ ಆಗುತ್ತದೆ. ಪೋರ್ಸಲೆನ್ ಫ್ಯಾಕ್ಟರಿ ಮತ್ತು ರೆಂಕೋ ಫ್ಯಾಕ್ಟರಿಗಳಿಗೆ ವಸ್ತುಗಳನ್ನು ಹ್ಯಾಂಡ್ ಓವರ್ ಮಾಡುವಾಗ ನಮ್ಮ ದೇಶಕ್ಕೆ ಎಷ್ಟು ಬೇಕು, ಅಂಥಾದ್ದು ಇಲ್ಲೇ ಸಪ್ಲೈ ಮಾಡಬೇಕು ಎಂದು ಕಂಡೀಷನ್ ಹಾಕದೇ ಬೆಂಗಳೂರಿನಲ್ಲಿ ತಯಾರಾಗುವ ವಸ್ತುಗಳನ್ನು ತೆಗೆದುಕೊಳ್ಳದೆ ಕಲ್ಕತ್ತ, ಉತ್ತರಪ್ರದೇಶದಿಂದ ತರಿಸಿ ಕೊಂಡು ಕೆಲಸಮಾಡುತ್ತಾರೆ. ಆದುದರಿಂದ ಬೆಂಗಳೂರಿನಲ್ಲಿ ಸಿಕ್ಕುವ ವಸ್ತುಗಳನ್ನು ಇಲ್ಲೇ ಪಡೆದು ಕೊಳ್ಳುವುದಕ್ಕೆ ಪ್ರಯತ್ನಮಾಡುತ್ತೀರಾ ?

ಶ್ರೀ. ಜಿ. ಹೆಚ್. ಅಶ್ವತ್ಥರೆಡ್ಡಿ.—ಮಾನ್ಯ ಅಧ್ಯಕ್ಷರೇ, ಹಳ್ಳಿಗಳಿಗೆ ಎಲೆಕ್ಟ್ರಿಸಿಟಿ ಒದಗಿಸುವುದಕ್ಕೆ ಕಲ್ಕತ್ತೆಗೆ ಆರ್ಡರ್ ಕೊಟ್ಟಿಲ್ಲ, ಕರ್ನಾಟಕದಲ್ಲೇ ಸಿಗುತ್ತಾ ಇದೆ, ಇಲ್ಲೇ ನಾವು ಆರ್ಡರ್ ಕೊಟ್ಟಿದ್ದೇವೆ. ಸಿಮೆಂಟ್ ಮತ್ತು ಉಕ್ಕಿನ ಕೊರತೆ ಇದೆ, ಆದ್ದರಿಂದ ಒಂದೆರಡು ತಿಂಗಳು ಲೇಟ್ ಆಗುತ್ತದೆ, ಸಾಮಾನುಗಳು ಬಂದೇ ಬರುತ್ತವೆ.